ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	138 (1054) (ವರ್ಗಾಯಿತ ಪ್ರಶ್ನೆ)
ವಿಧಾನ ಪರಿಷತ್ತಿನ ಸದಸ್ಯರ ಹೆಸರು	:	ಶ್ರೀ ಆರ್.ಬಿ.ತಿಮ್ಮಾಪೂರ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸ ಬೇಕಾದ ದಿನಾಂಕ	:	16.03.2020
ಉತ್ತರಿಸ ಬೇಕಾದವರು	:	ಮಾನ್ಯ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ ಸಕ್ಕರೆ ಕಾರ್ಖಾನೆಗಳು ಪ್ರಾರಂಭವಾದ ನಂತರ ಅದರ ಸುತ್ತಮುತ್ತಲಿನ ಪ್ರದೇಶಗಳು ಪರಿಸರ ಹಾನಿಗೆ ಒಳಗಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು;	ರಾಜ್ಯದಲ್ಲಿ 12 ಸಕ್ಕರೆ ಕಾರ್ಖಾನೆಗಳಿಂದ ಸುತ್ತಮುತ್ತಲಿನ ಪ್ರದೇಶಗಳಿಗೆ ಪರಿಸರ ಹಾನಿಯಾಗಿರುವ ಬಗ್ಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ದೂರುಗಳು ಬಂದಿದೆ.
(ಆ)	ಈ ರೀತಿ ಪರಿಸರ ಹಾನಿಗೆ ಒಳಗಾದ ಭೂಮಿಯ ಮಾಲೀಕರಿಗೆ ಸರ್ಕಾರವು ನೀಡಿರುವ ಪರಿಹಾರವೇನು; ಹಾಗಿಲ್ಲದಿದ್ದಲ್ಲಿ ಪರಿಹಾರ ನೀಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು;	ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನಲ್ಲಿ ಸ್ಥಾಪಿಸಿ ಕಾರ್ಯಾಚರಣೆಯಲ್ಲಿರುವ ಮೆ. ಎನ್.ಎಸ್.ಎಲ್.ಶುಗರ್ಸ್ ಲಿ. ಉದ್ದಿಮೆ ಸ್ಪೆಂಟ್ ವಾಷ್ ಡೈಜೆಸ್ಟರ್ ಕುಸಿದು, ಸ್ಪೆಂಟ್ ವಾಷ್ ಅಕ್ಕಪಕ್ಕದ ಕೃಷಿ ಜಮೀನಿಗೆ ಹರಿದಿರುವುದರಿಂದ ಆಗಿರುವ ಬೆಳೆ ಹಾನಿಯ ಅಂದಾಜು ಅಧ್ಯಯನ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಕಾರ್ಯವ್ಯಾಪ್ತಿಗೆ ಒಳಪಡುವುದಿಲ್ಲ. ಆದ್ದರಿಂದ ಬೆಳೆ ಹಾನಿಯ ಅಂದಾಜು ಅಧ್ಯಯನ ನಡೆಸಲು ಸಂಬಂಧಪಟ್ಟ ಇಲಾಖೆಗಳಾದ ಕೃಷಿ, ತೋಟಗಾರಿಕೆ, ರೇಷ್ಮೆ ಮುಂತಾದ ಇಲಾಖೆಗಳಿಗೆ ಮಾನ್ಯ ಜಿಲ್ಲಾಧಿಕಾರಿಗಳಿಂದ ನಿರ್ದೇಶನ ನೀಡಿದ್ದರು. ಅದರಂತೆ, ಮದ್ದೂರು ತಹಶೀಲ್ದಾರವರು ಸಮಿತಿಯನ್ನು ರಚಿಸಿ ಕೃಷಿ ಇಲಾಖೆ, ತೋಟಗಾರಿಕೆ ಮತ್ತು ಮೀನುಗಾರಿಕೆ ಇಲಾಖೆಗಳಿಂದ ಬೆಳೆ ನಷ್ಟ ಮೊತ್ತ ರೂ.80,58,194/- ಅಂದಾಜಿಸಲಾಗಿತ್ತು. ಈ ಪರಿಹಾರದ ಮೊತ್ತವನ್ನು 162 ಜಮೀನಿನ ಮಾಲೀಕರಿಗೆ ಕಾರ್ಖಾನೆ ಮತ್ತು ಜಿಲ್ಲಾಡಳಿತದ ವತಿಯಿಂದ ವಿತರಿಸಲಾಗಿದೆ.
(ಇ)	ಪರಿಸರ ಹಾನಿಗೆ ಒಳಗಾದ ಜಮೀನಿನ ಮಾಲೀಕರಿಗೆ ಪುನರ್ವಸತಿಗಾಗಿ ಇದುವರೆಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು; ಇದಕ್ಕಾಗಿ ಸರ್ಕಾರ ಹಾಕಿಕೊಂಡಿರುವ ಯೋಜನಗಳೇನು? (ಕಾರ್ಖಾನೆವಾರು ವಿವರ ನೀಡುವುದು)	ಈ ರೀತಿಯ ಪ್ರಕರಣಗಳು ಇರುವುದಿಲ್ಲ.

ಸಂಖ್ಯೆ: ಅಪಜೀ 76 ಇಪಿಸಿ 2020

13/03/2020

(ಆನಂದ್ ಸಿಂಗ್)

ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು.